2017 ಕ.ತೀ.ವ. 1259

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ಶ್ರೀನಿವಾಸೆ ಗೌಡ

## ವ್ಯವಸ್ಥಾಪಕ ನಿರ್ದೇಶಕರು, ತಮಿಳುನಾಡು ಸಾರಿಗೆ ನಿಗಮ –ವಿರುದ್ಧ– ಪಳನಿಯಮ್ಮ @ ಮುನಿಯಮ್ಮ*

ಮೋಟಾರು ವಾಹನಗಳ ಅಧಿನಿಯಮದ 173(1)ನೇ ಪ್ರಕರಣದಡಿಯಲ್ಲಿನ ಸಂಕೀರ್ಣ ಮೊದಲನೇ ಅಪೀಲು.

ಮೋಟಾರು ವಾಹನ ಮೊಕದ್ದಮೆ ಸಂ.6239/2007ರಲ್ಲಿ ದಿನಾಂಕ 03.01.2010ರಂದು ಬೆಂಗಳೂರಿನ XIXನೇ ಹೆಚ್ಚುವರಿ ಸಣ್ಣ ವ್ಯಾಜ್ಯಗಳು ನ್ಯಾಯಾಲಯ ಹಾಗೂ ಮೋಟಾರು ವಾಹನ ಅಪಘಾತಗಳ ಕ್ಲೇಮುಗಳ ನ್ಯಾಯಾಧಿಕರಣವು ನೀಡಿದ ತೀರ್ಪು ಮತ್ತು ಐತೀರ್ಪನ್ನು ಪ್ರಶ್ನಿಸಿ ಪ್ರಸ್ತುತ ಸಂಕೀರ್ಣ ಮೊದಲನೇ ಅಪೀಲನ್ನು ಸಲ್ಲಿಸಲಾಗಿದೆ.

ಒಂದಕ್ಕಿಂತ ಹೆಚ್ಚು ವಾಹನಗಳ ಚಾಲಕರಿಂದ ಅಪಘಾತವು ಸಂಭವಿಸಿರುವಾಗ ಅಂಥ ಪ್ರಕರಣದಲ್ಲಿ ಅಪಘಾತದ ಕಾರಣ ವ್ಯಕ್ತಿಗಳು ದೈಹಿಕವಾಗಿ ಕ್ಷತಿಯನ್ನು ಅಥವಾ ಮರಣವನಪ್ಪಿರುವಾಗ, ಸದರಿ ಅಪಘಾತದಲ್ಲಿ ಕ್ಷತಿಗೊಳಗಾದ ವ್ಯಕ್ತಿ ಅಥವಾ ಮರಣವಪ್ಪಿದ ವ್ಯಕ್ತಿ ಮೂರನೇ ಪಕ್ಷಕಾರನಾಗಿರುವಾಗ, ವಾಹನದ ಚಾಲಕರುಗಳ ನಿರ್ಲಕ್ಷತೆಯ ಪ್ರಮಾಣವನ್ನು ಗಮನಕ್ಕೆ ತೆಗೆದುಕೊಳ್ಳದೆ, ಅಪಘಾತಕ್ಕೆ ಒಳಗಾದ ಅಂಥ ವಾಹನದ ಚಾಲಕ, ಮಾಲೀಕ ಮತ್ತು ವಿಮಾಕರ್ತ ಇವರಲ್ಲಿ ಯಾರೊಬ್ಬರಿಂದಲೂ ನಷ್ಟ ಪರಿಹಾರವನ್ನು ವಸೂಲಿ ಮಾಡುವುದಕ್ಕೆ ಅಂಥ ಕ್ಷತಿಗೊಂಡ ವ್ಯಕ್ತಿ ಅಥವಾ ಅಂಥ ಮೃತ ವ್ಯಕ್ತಿಯ ಕಾನೂನುಸಮ್ಮತ ವಾರಸುದಾರರು ಹಕ್ಕುಳ್ಳವರಾಗಿರುತ್ತಾರೆ. ಅರ್ಜಿಗೆ ಪಕ್ಷಕಾರರಾಗುವಂತೆ ಅಪಘಾತದಲ್ಲಿ ಒಳಗೊಂಡ

* ಎಂಎಫ್ಎ ಸಂ:7891/2010 (ಎಂವಿ) ಇದರೊಂದಿಗೆ ಇತರೆ, ದಿನಾಂಕ: 25ನೇ ಜನವರಿ, 2016.

ಇತರ ವಾಹನಗಳ ಚಾಲಕ, ಮಾಲೀಕ ಮತ್ತು ವಿಮಾಕರ್ತರನ್ನು ಪ್ರಶ್ನಿಸುವುದಕ್ಕೆ ಆ ವಾಹನದ ಮಾಲೀಕ ಮತ್ತು ವಿಮಾಕರ್ತನ ಸಂಬಂಧದಲ್ಲಿ ಅದು ಕ್ರಮಗಳನ್ನು ತೆಗೆದುಕೊಳ್ಳುವುದು.

ಪ್ರಸಕ್ತ ಮೊಕದ್ದಮೆಯಲ್ಲಿ ಟಿಎನ್‌ಎಸ್‌ಟಿಸಿಯು ಅಪಘಾತದಲ್ಲಿ ಮತ್ತೊಂದು ವಾಹನವು ಒಳಗೊಂಡಿರುವ ಸಂಗತಿಯನ್ನು ರುಜುವಾತುಪಡಿಸುವುದಕ್ಕೆ ವಿಫಲವಾಗಿದೆ ಮತ್ತು ಮುಂದುವರೆದು ಅಪಘಾತಕ್ಕೆ ಒಳಗಾದ ಮೂರನೇ ಪಕ್ಷಕಾರನು ಟಿಎನ್‌ಎಸ್‌ಟಿಸಿ ಬಸ್ಸನಲ್ಲಿ ಪ್ರಯಾಣಿಕನಾಗಿ ಪ್ರಮಾಣಿಸುತ್ತಿದ್ದವನು ಕ್ಲೇಮುದಾರನಾಗಿದ್ದಾನೆಂದು ರುಜುವಾತುಗೊಂಡಿದೆ. ಆದುದರಿಂದ ಕ್ಲೇಮುದಾರರಾಗಿರುವ ಮೂರನೇ ಪಕ್ಷಕಾರನು ಯಾರೊಬ್ಬ ಅಪಕೃತ್ಯಕಾರಿನಿಂದ ನಷ್ಟಪರಿಹಾರವನ್ನು ವಸೂಲಿ ಮಾಡುವುದಕ್ಕೆ ಹಕ್ಕುಳ್ಳವನಾಗಿರುವನು. ಮೊಕದ್ದಮೆಯ ಸಂಗತಿ ಮತ್ತು ಸನ್ನಿವೇಶಗಳಲ್ಲಿ ನ್ಯಾಯಾಧೀಕರಣ ಟಿಎನ್‌ಎಸ್‌ಟಿಸಿಯ ಮೇಲೆ ಹೊಣೆಗಾರಿಕೆಯನ್ನು ಹೊರಿಸಿರುವುದು ನ್ಯಾಯಸಮ್ಮತವಾಗಿದೆ.

ತದನುಸಾರವಾಗಿ, ಎಂಎಫ್‌ಎ 664/2011 ಅನ್ನು ಭಾಗಶಃ ಪುರಸ್ಕರಿಸಲಾಗಿದೆ. ಮೇಲೆ ನಿರೂಪಿಸಿರುವಷ್ಟರಮಟ್ಟಿಗೆ ನ್ಯಾಯಾಧೀಕರಣವು ಹೊರಡಿಸಿದ ತೀರ್ಪು ಮತ್ತು ನಷ್ಟ ಪರಿಹಾರದ ನಿರ್ಣಯವನ್ನು ಮಾರ್ಪಡಿಸಲಾಗಿದೆ. ಕ್ಲೇಮುದಾರರು ಹೆಚ್ಚುವರಿ ನಷ್ಟ ಪರಿಹಾರ 4,29,000/– ರೂ.ಗಳನ್ನು ಕ್ಲೇಮು ಅರ್ಜಿಯ ದಿನಾಂಕದಿಂದ ವಸೂಲಿಯಾಗುವ ದಿನಾಂಕದವರೆಗೂ ವಾರ್ಷಿಕ ಶೇಕಡ 6ರಷ್ಟು ಬಡ್ಡಿಯೊಂದಿಗೆ ಪಡೆಯುವುದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

ಠೇವಣಿ ಮೊತ್ತವನ್ನು ಮೇಲೆ ಸೂಚಿಸಲಾದ ನಿಬಂಧನೆಗಳ ಅನುಸಾರ ವಿತರಣೆ ಮಾಡುವುದಕ್ಕಾಗಿ ನ್ಯಾಯಾಧಿಕರಣಕ್ಕೆ ವರ್ಗಾಯಿಸುವುದಕ್ಕಾಗಿ ಆದೇಶಿಸಿದೆ.

ಅರ್ಜಿದಾರರ ಪರವಾಗಿ : ಶ್ರೀ ಬಿ. ಪುರಂದರ, ವಕೀಲರ ಪರವಾಗಿ
ಶ್ರೀ ಸತೀಶ್ – ವಕೀಲರು
ಪ್ರತ್ಯರ್ಜಿದಾರರ ಪರವಾಗಿ : ಶ್ರೀ ಸುರೇಶ್ ಎಂ. ಲಾತೂರ್ ವಕೀಲರ ಪರವಾಗಿ
ಶ್ರೀಮತಿ ಸುನೀತಾ – ವಕೀಲರು

**ತೀರ್ಪು**

**ನ್ಯಾಯಮೂರ್ತಿ ಬಿ. ಶ್ರೀನಿವಾಸೆ ಗೌಡ:**

ತಮಿಳುನಾಡು ರಾಜ್ಯ ಸಾರಿಗೆ ನಿಗಮ (ಇನ್ನು ಮುಂದೆ ಇಲ್ಲಿ ಸಂಕ್ಷಿಪ್ತವಾಗಿ "ಟಿಎನ್‌ಎಸ್‌ಟಿಸಿ" ಎಂದು ಉಲ್ಲೇಖಿಸುವುದು)ವು ನ್ಯಾಯಾಧೀಕರಣವು ನಿರ್ಲಕ್ಷ್ಯತೆಯ ಅನುಷಂಗಿಕ ಹೊಣೆಗಾರಿಕೆ ಮತ್ತು ಅಗತ್ಯ ಪ್ರಮಾಣದ ಕಾರಣದ ಮೇಲೆ, ನೀಡಿದ ತೀರ್ಪು ಮತ್ತು ನಷ್ಟ ಪರಿಹಾರದ ನಿರ್ಣಯವನ್ನು ಆಕ್ಷೇಪಿಸಿ ಎಂಎಫ್‌ಎ 7891/2010 ಅನ್ನು ದಾಖಲಿಸಿದೆ.

ಕ್ಲೇಮುದಾರರು ನ್ಯಾಯಾಧೀಕರಣವು ನಿರ್ಣಯಿಸಿದ ನಷ್ಟ ಪರಿಹಾರವನ್ನು ಹೆಚ್ಚಿಸುವಂತೆ ಕೋರಿ ಎಂಎಫ್‌ಎ 664/2011 ಅನ್ನು ದಾಖಲಿಸಿರುವರು.

2. ಎರಡೂ ಅಪೀಲುಗಳು ನ್ಯಾಯಾಧೀಕರಣದ ಸಾಮಾನ್ಯ ತೀರ್ಪು ಮತ್ತು ನಷ್ಟ ಪರಿಹಾರದ ನಿರ್ಣಯದಿಂದ ಉದ್ಭವಿಸಿದ ಅಪೀಲುಗಳಾಗಿವೆ, ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಸಮ್ಮತಿಯೊಂದಿಗೆ, ಅವರುಗಳ ವಾದಗಳನ್ನು ಒಟ್ಟಿಗೆ ಆಲಿಸಿ, ಅಂತಿಮವಾಗಿ ಈ ಸಾಮಾನ್ಯ ತೀರ್ಪಿನ ಮೂಲಕ ವಿಲೆ ಮಾಡಲಾಗಿದೆ.

3. ಮತ್ತಷ್ಟೂ ಅನುಕೂಲತೆಗಳಿಗೋಸ್ಕರ, ಪಕ್ಷಕಾರರನ್ನು ನ್ಯಾಯಾಧೀಕರಣದ ಮುಂದೆ ಕ್ಲೇಮು ಅರ್ಜಿಯಲ್ಲಿ ಅವರನ್ನು ಉಲ್ಲೇಖಿಸಿರುವಂತೆ ಇಲ್ಲಿಯೂ ಉಲ್ಲೇಖಿಸಲಾಗಿದೆ.

4. ತಮಿಳುನಾಡು ರಾಜ್ಯ ರಸ್ತೆ ಸಾರಿಗೆ ನಿಗಮದ ಸಂ.ಟಿಎನ್–29–ಎನ್–1901 ಎಂಬ ನೋಂದಣಿ ಸಂಖ್ಯೆಯನ್ನು ಹೊಂದಿರುವ ಬಸ್ಸು ದಿನಾಂಕ 26.6.2007 ರಂದು ಬಸ್ಸಿನ ಚಾಲಕನಾಗಿದ್ದು, ಮತ್ತೊಂದು ಗೊತ್ತಿರದ ವಾಹನದ ನಡುವೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಕ್ಲೇಮುದಾರಳಿಗೆ ಉಂಟಾದ ಹಲವು ಕ್ಷತಿಗಳ ಸಂಬಂಧದಲ್ಲಿ ಯಾವುದೇ ವಿವಾದ ಇರುವುದಿಲ್ಲ. ಈ ಅಪೀಲುಗಳಲ್ಲಿ ನನ್ನ ಪರಿಗಣನೆಗಾಗಿ ಎತ್ತಲಾದ ಅಂಶಗಳು ಹೀಗಿದೆ:–

> “ಎ) ನ್ಯಾಯಾಧೀಕರಣವು ಟಿಎನ್‌ಎಸ್‌ಟಿಸಿ ಚಾಲಕನು ಬಸ್ಸನ್ನು ಅತಿವೇಗ ಮತ್ತು ನಿರ್ಲಕ್ಷತೆಯಿಂದ ಚಲಾಯಿಸಿದ ಕಾರಣದಿಂದ ಅಪಘಾತ ಸಂಭವಿಸಿದೆಯೆಂದು ಕೊಟ್ಟ ತೀರ್ಮಾನ ಕಾನೂನಿನಲ್ಲಿ ಸಮರ್ಥನೀಯವೇ ?
>
> ಬಿ) ನ್ಯಾಯಾಧೀಕರಣವು ಟಿಎನ್‌ಎಸ್‌ಟಿಸಿಯ ಮೇಲೆ ಅದೇ ಹೊಣೆಗಾರಿಕೆಯನ್ನು ಹೊರಿಸಿ ನೀಡಿದ ನಿರ್ಣಯವು ಕಾನೂನಿನಲ್ಲಿ ಸಮರ್ಥನೀಯವೇ ?
>
> ಸಿ) ಒಂದಕ್ಕಿಂತ ಹೆಚ್ಚು ವಾಹನಗಳ ಚಾಲಕರ ನಿರ್ಲಕ್ಷತೆಯಿಂದ ಅಪಘಾತವು ನಡೆದ ಮೊಕದ್ದಮೆಗಳಲ್ಲಿ ಅಪಘಾತದಲ್ಲಿ ಮೂರನೇ ಪಕ್ಷಕಾರ ವ್ಯಕ್ತಿ ಅಂಥ ಕ್ಷತಿಗಳಿಗೆ ಒಳಗಾಗಿದ್ದರೆ ಅಥವಾ ಮೃತನಾಗಿದ್ದರೆ, ವ್ಯಕ್ತಿಗೆ ಉಂಟಾದ ಕ್ಷತಿ ಅಥವಾ ಮರಣಕ್ಕೆ ಕಾರಣವಾದಂಥಹ ವಾಹನಗಳ ಚಾಲಕರ ನಿರ್ಲಕ್ಷತೆಯನ್ನು ಪರಿಗಣನೆಗೆ ತೆಗೆದುಕೊಳ್ಳದೆ, ವಾಹನದ ಚಾಲಕನಿಂದ, ಮಾಲೀಕನಿಂದ ಮತ್ತು ಯಾವುದೇ ವಿಮಾಕರ್ತನಿಂದ ನಷ್ಟಪರಿಹಾರವನ್ನು ವಸೂಲಿ ಮಾಡುವುದಕ್ಕೆ ಅಂಥ ಕ್ಷತಿಗೆ ಒಳಗಾದ ಅಥವಾ ಮರಣದ ವ್ಯಕ್ತಿ ಹಕ್ಕನ್ನು ಹೊಂದಿರುತ್ತಾರೆಯೇ?

5. ಟಿಎನ್‌ಎಸ್‌ಟಿಸಿ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಶ್ರೀ ಸತೀಶ್ ಅವರು ಹಾಜರಾಗಿ, ಟಿಎನ್‌ಎಸ್‌ಟಿಸಿ ಬಸ್‌ನ ಚಾಲಕ ಮತ್ತು ಮಾಹಿತಿ ಇರದ ವಾಹನದ ಚಾಲಕನ ನಿರ್ಲಕ್ಷತೆಯ ಭಾಗವಾಗಿ ಸಂಭವಿಸಿದ ಅಪಘಾತವೆಂದು ನಿವೇದಿಸಿರುವರು ಮತ್ತು ಪ್ರತಿವಾದಿ ಸಾಕ್ಷಿ.1 ಆಗಿರುವಂತಹ ಬಸ್ಸನ ಚಾಲಕನನ್ನು ವಿಚಾರಣೆ ಮಾಡಿದಾಗ ಅವನು ನೀಡಿದ ಮೌಖಿಕ ಸಾಕ್ಷ್ಯದಿಂದ ನಿರೂಪಿತವಾಗಿದೆಯೆಂದು ನಿವೇದಿಸಿರುವರು, ಆದರೂ, ನ್ಯಾಯಾಧೀಕರಣ ಟಿಎನ್‌ಎಸ್‌ಟಿಸಿಯ ಚಾಲಕನ ಅತಿವೇಗ ಮತ್ತು ನಿರ್ಲಕ್ಷತೆಯ ಚಾಲನೆಯಿಂದ ಸಂಭವಿಸಿದ ಅಪಘಾತವಾಗಿದೆ ಎಂದು ಮತ್ತು ಇಡೀ ಹೊಣೆಗಾರಿಕೆಯನ್ನು ಟಿಎನ್‌ಎಸ್‌ಟಿಸಿ ಮೇಲೆ ಹೊರಿಸಿರುವುದು ದೋಷದಿಂದ ಕೂಡಿದೆ ಎಂದು ಸಹ ನಿವೇದಿಸಿರುವರು. ನ್ಯಾಯವಾದಿಗಳು, ನ್ಯಾಯಾಧೀಕರಣವು ನಿರ್ಣಯಿಸಿದ ನಷ್ಟ ಪರಿಹಾರವು ಅತಿ ಹೆಚ್ಚಾಗಿದೆ ಮತ್ತು ಕಡಿಮೆಗೊಳಿಸಲು ಅಗತ್ಯಪಡಿಸಬೇಕೆಂದು ನಿವೇದಿಸಿರುವರು. ಆದುದರಿಂದ, ಅವರು ಕ್ಲೇಮುದಾರರು ಸಲ್ಲಿಸಿರುವ ಅಪೀಲನ್ನು ವಜಾಗೊಳಿಸಬೇಕೆಂದು ಮತ್ತು ಟಿಎನ್‌ಎಸ್‌ಟಿಸಿಯು ದಾಖಲಿಸಿದ ಅಪೀಲನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿರುವರು.

6. ಕ್ಲೇಮುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಶ್ರೀಮತಿ ಸುನೀತಾ ಅವರು ಹಾಜರಾಗಿ, ನ್ಯಾಯಾಧೀಕರಣದ ನಿರ್ಣಯಗಳು ಕಾನೂನು ಬಾಹಿರವಾಗಿರುವುದಿಲ್ಲ ಅಥವಾ ಅಶಕ್ತತೆಯಿಂದ ಕೂಡಿಲ್ಲವೆಂದು, ಈ ನ್ಯಾಯಾಲಯ ನ್ಯಾಯಾಧೀಕರಣದ ನಿರ್ಲಕ್ಷತೆಯ ಮೇಲಾಗಲೀ ಅಥವಾ ಹೊಣೆಗಾರಿಕೆಯ ವಾರೆಂಟಿನ ಮೇಲಾಗಲೀ ಹಸ್ತಕ್ಷೇಪ ಮಾಡುವಂತೆ ನಿವೇದಿಸಿರುವರು. ಪರಿಮಾಣದ ಸಂಬಂಧದಲ್ಲಿ, ಕ್ಲೇಮುದಾರರ ದೇಹದ ಕೆಳಭಾಗದಲ್ಲಿ ಉಂಟಾದ ಕ್ಷತಿಗಳ ಸ್ವರೂಪಗಳ ಸಂಬಂಧದಲ್ಲಿ ನ್ಯಾಯಾಧೀಕರಣವು ನಿರ್ಣಯಿಸಿದ ನಷ್ಟ ಪರಿಹಾರವನ್ನು ನಿವೇದಿಸಿರುವರು. ಆದುದರಿಂದ, ಕ್ಲೇಮುದಾರರು ದಾಖಲಿಸಿದ ಅಪೀಲನ್ನು ಪುರಸ್ಕರಿಸಬೇಕೆಂದು ಮತ್ತು ನಿಗಮವು ದಾಖಲಿಸಿದ ಅಪೀಲನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿರುವರು.

**ಘಟಕಾಂಶ ಸಂ.1:**

7. ನ್ಯಾಯವಾದಿಗಳು ಕ್ಲೇಮುದಾರರಿಗೆ ಪೂರಕವಾದ ವಾದಾಂಶಗಳನ್ನು ಮಂಡಿಸಿರುವರು. ಅದರಂತೆ, 26.06.2007 ರಂದು ಕ್ಲೇಮುದಾರರು ಸಂ.ಟಿಎನ್–29–ಎನ್–1901ರಲ್ಲಿ ನೋಂದಣಿಯಾಗಿರುವ ಟಿಎನ್‌ಎಸ್‌ಟಿಸಿ ಬಸ್ಸಿನಲ್ಲಿ ಪ್ರಯಾಣಿಕರಾಗಿ ಪ್ರಯಾಣಿಸುತ್ತಿರುವಾಗ ಸದರಿ ಬಸ್‌ನ ಚಾಲಕನು ಬಸ್ಸನ್ನು ಅತಿವೇಗದಿಂದ ಮತ್ತು ನಿರ್ಲಕ್ಷತೆಯ ರೀತಿಯಲ್ಲಿ ಚಲಾಯಿಸುತ್ತಿರುತ್ತಾನೆ. ಸದರಿ ಬಸ್ಸನ ಚಾಲಕ ತನ್ನ ಬಸ್ಸನ್ನು ಮುಂದೆ ಚಲಿಸುತ್ತಿದ್ದ ವಾಹನವನ್ನು ಹಿಂದಿಕ್ಕಿ ಮುನ್ನುಗ್ಗುವ ಉದ್ದೇಶದಿಂದ ಬಸ್ಸನ್ನು ಚಲಾಯಿಸುತ್ತಿದ್ದ ಸಂದರ್ಭದಲ್ಲಿ ಈ ಅಪಘಾತವಾಗಿದೆ. ಅಪಘಾತದ ಕಾರಣ ಕ್ಲೇಮುದಾರರ ಬಲಗೈಗೆ ಜಜ್ಜು ಗಾಯಗಳು ಉಂಟಾಯಿತು ಮತ್ತು ತತ್‌ಪರಿಣಾಮವಾಗಿ ಕ್ಲೇಮುದಾರರ ಬಲಗೈನ ಭುಜದವರೆಗೂ ಕ್ಷತಿಗೊಂಡಿರುವುದು ಪ್ರಾಸಾ.1ರಲ್ಲಿ ಅವರನ್ನು ವಿಚಾರಣೆಗೆ ಒಳಪಡಿಸಿದಾಗ ಅವರ ಅಂಗಚ್ಛೇಧನವಾಗಿರುವುದನ್ನು ಕಂಡು ಬಂದಿದೆ ಮತ್ತು ಪ್ರಥಮ ಮಾಹಿತಿ ವರದಿ ಮತ್ತು ಐಎಂವಿ ವರದಿಯಲ್ಲಿ ನಿಶಾನೆ ಪಿ.1 ಮತ್ತು 2ರಲ್ಲಿ ಗುರುತು ಮಾಡಿದ ಮತ್ತು ನಿಶಾನೆ ಪಿ.3 ರಿಂದ ಪಿ.9ರಲ್ಲಿ ಅನುಕ್ರಮವಾಗಿ ಗುರುತು ಮಾಡಿದ ಏಳು ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವರು. ಕ್ಲೇಮುದಾರರು, ತಮ್ಮ ಕ್ಲೇಮು ಅರ್ಜಿಯಲ್ಲಿ ಅದನ್ನೆಲ್ಲ ದೃಢೋಕ್ತಿ ತಮ್ಮ ಸಾಕ್ಷ್ಯವಾಗಿ ಪುನಃ ಹೇಳಿರುವರು. ಅವರ ವಾದಾಂಶದಲ್ಲಿ ಟಿಎನ್‌ಎಸ್‌ಟಿಸಿ ಬಸ್‌ನ ಚಾಲಕನ ಅತಿವೇಗ ಮತ್ತು ನಿರ್ಲಕ್ಷತೆಯ ಚಾಲನೆಯ ಕಾರಣದಿಂದಾಗಿಯೇ ಈ ಅಪಘಾತ ಸಂಭವಿಸಿರುವುದನ್ನು ಎಫ್‌ಐಆರ್ ಮತ್ತು ಐಎಂವಿ ವರದಿಯಲ್ಲಿ ಅನುಕ್ರಮವಾಗಿ ಗುರುತು ಮಾಡಿದಂತೆ, ನಿಶಾನೆ ಪಿ.1 ಮತ್ತು ಪಿ.2ರಲ್ಲಿ ಅದನ್ನು ಪುಷ್ಟೀಕರಿಸುತ್ತದೆ.

8. ಟಿಎನ್‌ಎಸ್‌ಟಿಸಿಯು ತನ್ನ ಟಿಎನ್‌ಎಸ್‌ಟಿಸಿಯ ಚಾಲಕ ಮತ್ತು ಪತ್ತೆ ಹಚ್ಚಲು ಸಾಧ್ಯವಾಗದ ಮತ್ತೊಂದು ವಾಹನದ ಚಾಲಕ ಈ ಇಬ್ಬರು ಚಾಲಕರ ನಿರ್ಲಕ್ಷತೆಯ ಚಾಲನೆಯಿಂದ ಈ ಅಪಘಾತ ಸಂಭವಿಸಿದೆ ಎಂಬ ವಾದಾಂಶ, ಅಪಘಾತಕ್ಕೆ ಕಾರಣವಾದ ಆ ಯಾವುದೇ ವಾಹನವನ್ನು ಇನ್ನು ಪತ್ತೆ ಹಚ್ಚಲು ಸಾಧ್ಯವಾಗಿರುವುದಿಲ್ಲ ಮತ್ತು ಅಪಘಾತಕ್ಕೆ ಯಾವುದೇ ಸ್ವಾತಂತ್ರ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ ಎಂಬ ವಾದಾಂಶವನ್ನು ಪುಷ್ಟೀಕರಿಸುತ್ತದೆ.

9. ಪಕ್ಷಕಾರರ ವಾದಾಂಶಗಳ ಪ್ರಕಾರದಂತೆ, ಅಪಘಾತವು ಟಿಎನ್‌ಎಸ್‌ಟಿಸಿ ಬಸ್ಸು ಮತ್ತು ಪತ್ತೆಯಾಗದ ಮತ್ತೊಂದು ವಾಹನದ ಕಾರಣದಿಂದಲೇ ನಡೆದಿರುತ್ತದೆ. ಟಿಎನ್‌ಎಸ್‌ಟಿಸಿ ಹೊರತುಪಡಿಸಿದ ವಿವಾದವಾಗಿದ್ದರೂ, ಮತ್ತೊಂದು ವಾಹನ ಒಳಗೊಂಡಿರುವ ಬಗ್ಗೆ ಅಧಿಕಾರ ವ್ಯಾಪ್ತಿಯ ಪೊಲೀಸರಿಗೆ ಮಾಹಿತಿ ನೀಡುವುದಕ್ಕೆ ಆಯ್ಕೆ ಮಾಡದಿರುವುದು ಮತ್ತು ವಾಹನವನ್ನು ಮತ್ತು ಪ್ರಶ್ನಿತ ಚಾಲಕನನ್ನು ಆ ವಾಹನದ ಮಾಲೀಕ ಮತ್ತು ವಿಮಾಕರ್ತನನ್ನು ಪತ್ತೆ ಮಾಡುವುದಕ್ಕೆ ಯಾವುದೇ ಪ್ರಯತ್ನವನ್ನು ಮಾಡದಿರುವುದು ಮತ್ತು ಮೇಲಿನ ಸನ್ನಿವೇಶಗಳ ಅಡಿಯಲ್ಲಿ ಆದ ಅಪಘಾತದಲ್ಲಿ ಪತ್ತೆ ಹಚ್ಚಲು ಸಾಧ್ಯವಾಗದ ಮತ್ತೊಂದು ವಾಹನ ಒಳಗೊಂಡಿರುವ ಮಂಡನೆಯನ್ನು ಸುಸ್ಥಾಪಿಸಲು ಸಾಕ್ಷ್ಯಗಳು ಇಲ್ಲದಿರುವ ಕಾರಣ ನ್ಯಾಯಾಧೀಕರಣ ಟಿಎನ್‌ಎಸ್‌ಟಿಸಿ ಬಸ್ಸನ ಚಾಲಕನ ಅತಿವೇಗ ಮತ್ತು ನಿರ್ಲಕ್ಷ್ಯತೆಯ ಚಾಲನೆಯ ಕಾರಣ ಅಪಘಾತಕ್ಕೆ ಕಾರಣವಾಗಿದೆ ಎಂಬ ನಿರ್ಣಯವನ್ನು ದಾಖಲೆ ಮೇಲೆ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಪರಿಗಣನೆಯು ಸಮರ್ಥನೀಯವಾಗಿದೆ.

**ಘಟಾಕಾಂಶ ಸಂಖ್ಯೆ 2 ಮತ್ತು 3:**

10. ಒಂದಕ್ಕಿಂತ ಹೆಚ್ಚು ವಾಹನಗಳ ಚಾಲಕರಿಂದ ಅಪಘಾತವು ಸಂಭವಿಸಿರುವಾಗ ಅಂಥ ಪ್ರಕರಣದಲ್ಲಿ ಅಪಘಾತದ ಕಾರಣ ವ್ಯಕ್ತಿಗಳು ದೈಹಿಕವಾಗಿ ಕ್ಷತಿಗೆ ಒಳಗಾಗಿರುವಾಗ ಅಥವಾ ಮರಣವನಪ್ಪಿರುವಾಗ, ಸದರಿ ಅಪಘಾತದಲ್ಲಿ ಕ್ಷತಿಗೊಳಗಾದ ವ್ಯಕ್ತಿ ಅಥವಾ ಮರಣವಪ್ಪಿದ ವ್ಯಕ್ತಿ ಮೂರನೇ ಪಕ್ಷಕಾರನಾಗಿರುವಾಗ, ವಾಹನದ ಚಾಲಕರುಗಳ ನಿರ್ಲಕ್ಷತೆಯ ಪ್ರಮಾಣವನ್ನು ಗಮನಕ್ಕೆ ತೆಗೆದುಕೊಳ್ಳದೆ, ಅಪಘಾತಕ್ಕೆ ಒಳಗಾದ ಅಂಥ ವಾಹನದ ಚಾಲಕ, ಮಾಲೀಕ ಮತ್ತು ವಿಮಾಕರ್ತ ಇವರಲ್ಲಿ ಯಾರೊಬ್ಬರಿಂದಲೂ ನಷ್ಟ ಪರಿಹಾರವನ್ನು ವಸೂಲಿ ಮಾಡುವುದಕ್ಕೆ ಅಂಥ ಕ್ಷತಿಗೊಂಡ ವ್ಯಕ್ತಿ ಅಥವಾ ಅಂಥ ಮೃತ ವ್ಯಕ್ತಿಯ ಕಾನೂನು ಸಮ್ಮತ ವಾರಸುದಾರರು ಹಕ್ಕುಳ್ಳವರಾಗಿರುತ್ತಾರೆ. ಅಪಘಾತದಲ್ಲಿ ಒಳಗೊಂಡ ಇತರ ವಾಹನಗಳ ಚಾಲಕ, ಮಾಲೀಕ ಮತ್ತು ವಿಮಾಕರ್ತರನ್ನು ಅರ್ಜಿಗೆ ಪಕ್ಷಕಾರರಾಗುವಂತೆ ಮಾಡುವುದಕ್ಕೆ ಆ ವಾಹನದ ಮಾಲೀಕ ಮತ್ತು ವಿಮಾಕರ್ತನ ಸಂಬಂಧದಲ್ಲಿ ಅದು ಕ್ರಮಗಳನ್ನು ತೆಗೆದುಕೊಳ್ಳುವುದು.

ಪ್ರಸಕ್ತ ಮೊಕದ್ದಮೆಯಲ್ಲಿ ಟಿಎನ್‌ಎಸ್‌ಟಿಸಿಯು ಅಪಘಾತದಲ್ಲಿ ಮತ್ತೊಂದು ವಾಹನವು ಒಳಗೊಂಡಿರುವ ಸಂಗತಿಯನ್ನು ರುಜುವಾತು ಪಡಿಸುವುದಕ್ಕೆ ವಿಫಲವಾಗಿದೆ ಮತ್ತು ಮುಂದುವರೆದು ಅಪಘಾತಕ್ಕೆ ಒಳಗಾದ ಮೂರನೇ ಪಕ್ಷಕಾರನು ಟಿಎನ್‌ಎಸ್‌ಟಿಸಿ ಬಸ್ಸನಲ್ಲಿ ಪ್ರಯಾಣಿಕನಾಗಿ ಪ್ರಮಾಣಿಸುತ್ತಿದ್ದವನು ಕ್ಲೇಮುದಾರನಾಗಿದ್ದಾನೆಂದು ರುಜುವಾತುಗೊಂಡಿದೆ. ಆದುದರಿಂದ ಕ್ಲೇಮುದಾರರಾಗಿರುವ ಮೂರನೇ ಪಕ್ಷಕಾರನು ಯಾರೊಬ್ಬ ಅಪಕೃತ್ಯಕಾರಿಯಿಂದ ನಷ್ಟಪರಿಹಾರವನ್ನು ವಸೂಲಿ ಮಾಡುವುದಕ್ಕೆ ಹಕ್ಕುಳ್ಳವನಾಗಿರುವನು. ಮೊಕದ್ದಮೆಯ ಸಂಗತಿ ಮತ್ತು ಸನ್ನಿವೇಶಗಳಲ್ಲಿ ನ್ಯಾಯಾಧೀಕರಣ ಟಿಎನ್‌ಎಸ್‌ಟಿಸಿಯ ಮೇಲೆ ಹೊಣೆಗಾರಿಕೆಯನ್ನು ಹೊರಿಸಿರುವುದು ನ್ಯಾಯಸಮ್ಮತವಾಗಿದೆ. ಘಟಕಾಂಶ ಸಂ.2 ಮತ್ತು 3ಕ್ಕೆ ಅನುಕ್ರಮವಾಗಿ ಉತ್ತರಿಸಲಾಗಿದೆ.

11. ನಿಶಾನೆ ಪಿ.3 ಗಾಯ ಪ್ರಮಾಣ ಪತ್ರದಂತೆ, ಕ್ಲೇಮುದಾರ ಜಜ್ಜು ಕ್ಷತಿಯೂ ಅವರ ಬಲಗೈನ ಹೆಗಲ ಮೂಳೆ ಮತ್ತು ಕತ್ತಿನ ಮೂಳೆ, ಮೊಣಕೈನ ಕೀಲುಗಳು, ಮುಂಗೈನ ಕೀಲುಗಳು, ಕೈ ತೋಳಿನ ನರಗಳು ಮತ್ತು ಮಾಂಸ ಖಂಡಗಳು ಕಳಚಿಕೊಂಡಿರುವುದು ಕಂಡು ಬಂದಿದೆ ಮತ್ತು ಅವರ ಎಡಗೈನ ಮುಂಗೈನ ಕೀಲುಗಳು 3x 1x 1 ಸೆಂ.ಮೀಗಳಷ್ಟು ಕ್ಷತಿಗೊಳಗಾಗಿ ಸಹಿಸಲು ಅಸಾಧ್ಯವಾದ ನೋವಿನಿಂದ ಬಳಲುತ್ತಿದ್ದ ಕ್ಲೇಮುದಾರರ ಬಲಗೈ ಅವರ ಭುಜದ ಕೀಲುಗಳಿಂದ ಅಂಗಚ್ಛೇಧನವಾಗಿದೆ ಎಂಬುದನ್ನು ಕ್ಲೇಮುದಾರರ ಗಾಯ ಪ್ರಮಾಣ ಪತ್ರ ಸಮರ್ಥಿಸುತ್ತದೆ. ಸಂಖ್ಯೆ 1ರ ಕ್ಷತಿಯೂ ಸಂಕಟ ಸ್ವರೂಪವಾಗಿರುತ್ತದೆ ಮತ್ತು ಸಂಖ್ಯೆ.2 ಈ ಕ್ಷತಿಯೂ ಸಾಮಾನ್ಯ ಸ್ವರೂಪವಾಗಿರುತ್ತದೆ. ಕ್ಲೇಮುದಾರರ ಕ್ಷತಿಯನ್ನು ಅವರ ನಿಶಾನೆ ಪಿ.4ರಲ್ಲಿ ಆಸ್ಪತ್ರೆಯಿಂದ ಬಿಡುಗಡೆಯಾದ ಚೀಟಿಯೇ ನಿಶಾನೆ ಪಿ.5ರಲ್ಲಿ ನೆಗೆಟಿವ್‌ನೊಂದಿಗೆ ಛಾಯಾಚಿತ್ರಗಳು, ನಿಶಾನೆ ಪಿ.8ರಲ್ಲಿ ಹೊರ ರೋಗಿಯ ಚೀಟಿ ಮತ್ತು ನಿಶಾನೆ ಪಿ.9 ರಲ್ಲಿ ಎಕ್ಸ್‌ರೇ ಮತ್ತು ಪ್ರಾಸಾ.1 ಮತ್ತು ಪ್ರಾಸಾ.2 ಅನುಕ್ರಮವಾಗಿ ವಿಚಾರಣೆ ಅಂದರೆ ಕ್ಲೇಮುದಾರರ ಮತ್ತು ವೈದ್ಯರ ಮೌಖಿಕ ಸಾಕ್ಷ್ಯವು ಕ್ಲೇಮುದಾರರ ಕ್ಷತಿಯನ್ನು ಪುಷ್ಠಿಕರಿಸುವ ಸಾಕ್ಷ್ಯವಾಗಿರುತ್ತದೆ. ಪ್ರಾಸಾ.2 ಆಗಿರುವ ವೈದ್ಯರು ಕ್ಲೇಮುದಾರರು ಶೇಕಡ 30ರಷ್ಟು ಅಂಗವೈಕಲ್ಯತೆಯಿಂದ ಬಾಧಿತರಾಗಿರುವರೆಂದು ಸಾಕ್ಷ್ಯವಾಗಿ ನಿರೂಪಿಸಿರುವರು.

12. ನ್ಯಾಯಾಧೀಕರಣವು, ಕ್ಲೇಮುದಾರರ ಕ್ಷತಿಗಳ ಸ್ವರೂಪವನ್ನು ಪರಿಗಣಿಸಿ ಅದರಲ್ಲೂ ನಿರ್ದಿಷ್ಟವಾಗಿ ಬಲಗೈನ ಭುಜದ ಕೀಲುಗಳ ಛೇದಕವಾಗಿರುವ ಕ್ಷತಿಗಾಗಿ ಅತಿ 'ನೋವು ಮತ್ತು ಬಾಧೆಗೆ' ಸಂಬಂಧಿಸಿದಂತೆ 50,000/– ರೂ.ಗಳನ್ನು ನಿರ್ಣಯಿಸಿರುವುದು ಅತ್ಯಂತ ಕಡಿಮೆಯದ್ದಾಗಿದೆ, ಆದುದರಿಂದ ಅದನ್ನು 1,00,000/– ರೂ.ಗಳಿಗೆ ಹೆಚ್ಚಿಸಲು ನಿರ್ಣಯಿಸಿದೆ ಹಾಗೂ ಇದರಿಂದಾಗಿ ಈ ಶೀರ್ಷಿಕೆಯ ಅಡಿಯಲ್ಲಿ ಒಟ್ಟು 1,50,000/– ರೂ.ಗಳನ್ನು ನಿರ್ಣಯಿಸಿದೆ.

13. ನ್ಯಾಯಾಧೀಕರಣವು, ಕ್ಲೇಮುದಾರರು ಹಾಜರುಪಡಿಸಿದ 'ವೈದ್ಯಕೀಯ ವೆಚ್ಚಗಳು' ವೈದ್ಯಕೀಯ ಬಿಲ್ಲುಗಳನ್ನು ಆಧರಿಸಿ 25,000/– ರೂ.ಗಳನ್ನು ನಿರ್ಣಯಿಸಿದೆ. ಈ ಶೀರ್ಷಿಕೆಯ ಅಡಿಯಲ್ಲಿ ಮೊತ್ತವನ್ನು ಕಡಿಮೆ ಮಾಡುವುದಕ್ಕಾಗಲೀ ಅಥವಾ ಹೆಚ್ಚು ಮಾಡುವುದಕ್ಕಾಗಲೀ ಯಾವ ಅಗತ್ಯವೂ ಇರುವುದಿಲ್ಲ. ಆದುದರಿಂದ ಈ ಮೊತ್ತ ನ್ಯಾಯಸಮ್ಮತವಾಗಿದೆ ಮತ್ತು ಸೂಕ್ತವಾಗಿದೆ.

14. ಕ್ಲೇಮುದಾರರು, ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಸುಮಾರು 79 ದಿನಗಳ ಕಾಲಾವಧಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಸರ್ಕಾರಿ ಆಸ್ಪತ್ರೆಯಾಗಿರುವ ಬೌರಿಂಗ್ ಆಸ್ಪತ್ರೆಯಲ್ಲಿ ಒಳರೋಗಿಯಂತೆ ಚಿಕಿತ್ಸೆ ಪಡೆದಿರುವುದನ್ನು ಪರಿಗಣಿಸಿ ನ್ಯಾಯಾಧೀಕರಣ 'ಸಾಂದರ್ಭಿಕ ವೆಚ್ಚಗಳು' ಮತ್ತು ಇದರೊಂದಿಗೆ ಸಾರಿಗೆ, ಪೋಷಣೆ ಮತ್ತು ವೈದ್ಯಕೀಯ ಖರ್ಚುಗಳಾಗಿ ಸುಮಾರು 10,000/– ರೂ.ಗಳನ್ನು ನಿರ್ಣಯಿಸಿದೆ. ಈ ಶೀರ್ಷಿಕೆಯ ಅಡಿಯಲ್ಲಿ ಈ ಮೊತ್ತವನ್ನು ಕಡಿಮೆ ಮಾಡುವುದಾಕ್ಕಾಗಲೀ ಅಥವಾ ಹೆಚ್ಚು ಮಾಡುವುದಾಗಲೀ ಅಗತ್ಯವಿರುವುದಿಲ್ಲ. ಆದುದರಿಂದ ಈ ಮೊತ್ತ ನ್ಯಾಯಸಮ್ಮತವಾಗಿದೆ ಮತ್ತು ಸೂಕ್ತವಾಗಿದೆ.

15. ನ್ಯಾಯಾಧೀಕರಣವು, ಕ್ಲೇಮುದಾರರಿಗೆ ಉಂಟಾದ ಕ್ಷತಿಗಳ ಸ್ವರೂಪವನ್ನು ವೈದ್ಯರು ಅಂಗವೈಕಲ್ಯತೆ ಎಂದು ನಿರೂಪಿಸಿರುವುದನ್ನು ಪರಿಗಣಿಸಿ ಮತ್ತು ಕ್ಲೇಮುದಾರಳು ಭವಿಷ್ಯದ ಬದುಕನ್ನು ತೃಪ್ತಿಕರವಾಗಿ ಮತ್ತು ಸಂತೋಷಕರವಾಗಿ ನಡೆಸುವುದಕ್ಕೆ ಸಾಧ್ಯವಿರುವುದಿಲ್ಲವೆಂಬುದನ್ನು ಗಮನಿಸಿ 'ಸೌಲಭ್ಯಗಳ ನಷ್ಟವಾಗಿ'

ನ್ಯಾಯಾಧಿಕರಣ ನೀಡಿದ್ದ 10,000/– ರೂ.ಗಳ ಬದಲಾಗಿ ಮೊತ್ತ **1,50,000/–** ರೂ.ಗಳನ್ನು ನಿರ್ಣಯಿಸಲಾಗಿದೆ.

16. ಕ್ಲೇಮುದಾರಳು ತನ್ನ ಬಲಗೈಯನ್ನು ಭುಜದ ಕೀಲುಗಳವರೆಗೂ ಕಳೆದುಕೊಂಡಿರುವಳು ಮತ್ತು ಅವಳು ಬಲಗೈಯವಳಾಗಿದ್ದಳೂ ಎಂಬುದು ವಿವಾದವಾಗಿರುವುದಿಲ್ಲ. ಅವಳು ಈಗ ತನ್ನ ಎಲ್ಲ ದೈನಂದಿನ ಕೆಲಸಗಳನ್ನು ಮಾಡುವುದಕ್ಕಾಗಿ ಕ್ಲೇಮುದಾರಳು ತನ್ನ ಎಡಗೈಯನ್ನು ಬಳಸಬೇಕಾಗಿದೆ. ಹಾಗಾಗಿ ಅಪಘಾತಕ್ಕೆ ಮುಂಚೆ ಕ್ಲೇಮುದಾರಳು ಮಾಡುತ್ತಿದ್ದ ಸಂಪಾದನೆಯಂತೆ ಈಗ ಅವಳು ಸಂಪಾದನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ, ಕ್ಲೇಮುದಾರಳು ಶೇಕಡ 100 ರಷ್ಟು ಕಾರ್ಯನಿರ್ವಹಿಸುವ ಅಂಗವೈಕಲ್ಯತೆಯನ್ನು ಪರಿಗಣಿಸುವುದು ಸಮರ್ಥವಾಗಿದೆ ಮತ್ತು ಸೂಕ್ತವಾಗಿದೆ. ಅಪಘಾತದ ಸಮಯದಲ್ಲಿ ಕ್ಲೇಮುದಾರಳಿಗೆ ಸುಮಾರು 51 ವರ್ಷ ವಯಸ್ಸಾಗಿತ್ತು ಮತ್ತು ಅವಳ ವಯಸ್ಸಿನ ಸಮೂಹಕ್ಕೆ ಅನ್ವಯವಾಗುವಂತಹ 11 ಅನ್ನು ಗುಣಕವಾಗಿ ತೆಗೆದುಕೊಳ್ಳಲಾಗಿದೆ. ಅವಳ ಪ್ರತಿ ತಿಂಗಳ ಆದಾಯವನ್ನು 4,500/– ಎಂದು ನಿರ್ಧರಿಸಲಾಗಿದೆ. ಆದುದರಿಂದ, 'ಭವಿಷ್ಯದ ಆದಾಯದ ನಷ್ಟ'ವಾಗಿ ನ್ಯಾಯಾಧೀಕರಣ ನಿರ್ಣಯಿಸಿದ್ದ 3,96,000/– ರೂ.ಗಳ ಬದಲಾಗಿ (4500 x 12 x 11) **5,94,000/–** ರೂಗಳೆಂದು ನಿರ್ಧರಿಸಲಾಗಿದೆ.

17. 'ಭವಿಷ್ಯದ ಆದಾಯ ನಷ್ಟ' ಶೀರ್ಷಿಕೆಯ ಅಡಿಯಲ್ಲಿ ಶೇಕಡ 100 ರಷ್ಟು ಕಾರ್ಯನಿರ್ವಹಿಸುವ ಅಂಗವೈಕಲ್ಯತೆಯನ್ನು ತೆಗೆದುಕೊಂಡು ನಷ್ಟ ಪರಿಹಾರವನ್ನು ನಿರ್ಣಯಿಸಿದ ದೃಷ್ಟಿಯಿಂದ 'ಚೇತರಿಕೆಯ ಕಾಲಾವಧಿಯಲ್ಲಿ ಆದಾಯದ ನಷ್ಟ' ಶೀರ್ಷಿಕೆಯ ಅಡಿಯಲ್ಲಿ ನಷ್ಟಪರಿಹಾರವನ್ನು ನಿರ್ಣಯಿಸಿರುವುದಿಲ್ಲ. ಆದುದರಿಂದ, ನ್ಯಾಯಾಧೀಕರಣವು 'ಚೇತರಿಕೆಯ ಕಾಲಾವಧಿಯಲ್ಲಿ ಆದಾಯ ನಷ್ಟ'ದ ಅಡಿಯಲ್ಲಿ 9,000/– ರೂ.ಗಳನ್ನು ನಿರ್ಣಯಿಸಿರುವುದನ್ನು ಪುರಸ್ಕರಿಸಲು ಸಾಧ್ಯವಿಲ್ಲ.

18. ಹೀಗಾಗಿ ಕ್ಲೇಮುದಾರರು ಈ ಕೆಳಗಿನ ನಷ್ಟ ಪರಿಹಾರಕ್ಕಾಗಿ ಹಕ್ಕುಳ್ಳವರಾಗಿರತಕ್ಕದ್ದು.

| **ಶೀರ್ಷಿಕೆಗಳು** | **ರೂ.ಗಳು** |
|---|---|
| ನೋವು ಮತ್ತು ಬಾಧೆಗಳು | 1,50,000/- |
| ವೈದ್ಯಕೀಯ ವೆಚ್ಚಗಳು | 25,000/- |
| ಸಾಂದರ್ಭಿಕ ವೆಚ್ಚಗಳು | 10,000/- |
| ಸೌಲಭ್ಯಗಳ ನಷ್ಟ | 1,50,000/- |
| ಭವಿಷ್ಯದ ಆದಾಯ ನಷ್ಟ | 5,94,000/- |
| **ಒಟ್ಟು** | **9,29,000/-** |
| ಕಡಿತ: ನ್ಯಾಯಾಧೀಕರಣ ನಿರ್ಣಯಿಸಿದ ನಷ್ಟ ಪರಿಹಾರ | 5,00,000/- |
| **(ಹೆಚ್ಚುವರಿ ಬಾಕಿ ನಷ್ಟ ಪರಿಹಾರ)** | **4,29,000/-** |

19. ತದನುಸಾರವಾಗಿ, ಎಂಎಫ್ಎ 664/2011 ಅನ್ನು ಭಾಗಶಃ ಪುರಸ್ಕರಿಸಲಾಗಿದೆ. ಮೇಲೆ ನಿರೂಪಿಸಿರುವಷ್ಟರಮಟ್ಟಿಗೆ ನ್ಯಾಯಾಧೀಕರಣವು ಹೊರಡಿಸಿದ ತೀರ್ಪು ಮತ್ತು ನಷ್ಟ ಪರಿಹಾರದ ನಿರ್ಣಯವನ್ನು ಮಾರ್ಪಡಿಸಲಾಗಿದೆ. ಕ್ಲೇಮುದಾರರು ಹೆಚ್ಚುವರಿ ನಷ್ಟ ಪರಿಹಾರ ರೂ.4,29,000/- ರೂ.ಗಳನ್ನು ಕ್ಲೇಮು ಅರ್ಜಿಯ ದಿನಾಂಕದಿಂದ ವಸೂಲಿಯಾಗುವ ದಿನಾಂಕದವರೆಗೂ ವಾರ್ಷಿಕ ಶೇಕಡ 6ರಷ್ಟು ಬಡ್ಡಿಯೊಂದಿಗೆ ಪಡೆಯುವುದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

20. ಟಿಎನ್ಎಸ್‌ಟಿಸಿಯು ಈ ತೀರ್ಪಿನ ಪ್ರತಿ ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗಾಗಿ ಬಡ್ಡಿಯೊಂದಿಗೆ ಹೆಚ್ಚುವರಿ ನಷ್ಟ ಪರಿಹಾರದ ಮೊತ್ತವನ್ನು ಠೇವಣಿ ಇಡುವಂತೆ ನಿರ್ದೇಶಿಸಲಾಗಿದೆ. ಪ್ರಮಾಣಾನುಸಾರ ಬಡ್ಡಿಯೊಂದಿಗೆ ಹೂಡಿಕೆ ಮಾಡಲು ಮೊಬಲಗಿನ ಶೇ.75 ರಷ್ಟು ಮೊತ್ತವನ್ನು ಕ್ಲೇಮುದಾರರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್/ಷೆಡ್ಯೂಲ್ ಬ್ಯಾಂಕ್/ ಗ್ರಾಮೀಣ ಬ್ಯಾಂಕ್/ಅಂಚೆ ಕಚೇರಿಯಲ್ಲಿ ನಿಯತಕಾಲಿಕವಾಗಿ ಬಡ್ಡಿಯನ್ನು ಪಡೆಯುವ

ಆಯ್ಕೆಯ ಹಕ್ಕಿನೊಂದಿಗೆ 7 ವರ್ಷಗಳ ಅವಧಿಗಾಗಿ ನಿಶ್ಚಿತ ಠೇವಣಿ ಇಡತಕ್ಕದ್ದು ಎಂದು ಆದೇಶಿಸುತ್ತದೆ. ಉಳಿದ ಶೇ.25 ರಷ್ಟು ಮೊಬಲಗನ್ನು ಕ್ಲೇಮುದಾರರ ಪರವಾಗಿ ಪ್ರಮಾಣಾನುಸಾರ ಬಡ್ಡಿಯೊಂದಿಗೆ ಬಿಡುಗಡೆ ಮಾಡಲು ಆದೇಶಿಸಿದೆ.

21. ನ್ಯಾಯಾಧೀಕರಣ ಶೇಕಡ 25 ರಷ್ಟಿನ ಮೊಬಲಗನ್ನು ಬಿಡುಗಡೆ ಮಾಡುವಾಗ ಕ್ಲೇಮುದಾರರು ನಿಶ್ಚಿತ ಠೇವಣಿ ಅವಧಿ ಮುಗಿದ ನಂತರ ನ್ಯಾಯಾಧಿಕರಣವನ್ನು ಮತ್ತೆ ಸಂಪರ್ಕಿಸುವ ಅಗತ್ಯವಿಲ್ಲದಂತೆ ಹಿಂಪಡೆಯುವುದಕ್ಕೆ ಅನುಕೂಲವಾಗುವಂತೆ ನಿಶ್ಚಿತ ಠೇವಣಿ ಚೀಟಿಗಳನ್ನು ನೀಡುವುದಕ್ಕೂ ಸಹ ನಿರ್ದೇಶಿಸಿದೆ, ಮತ್ತು ಬ್ಯಾಂಕು ಮೊತ್ತವನ್ನು ನಿಶ್ಚಿತ ಠೇವಣಿಯನ್ನು ಮಾಡಿಕೊಳ್ಳುವಾಗ ನ್ಯಾಯಾಧೀಕರಣದಿಂದ ಯಾವುದೇ ಹೆಚ್ಚಿನ ಆದೇಶವನ್ನು ನಿರೀಕ್ಷಿಸದೆ ಮೊಬಲಗಿನ ನಿಶ್ಚಿತ ಠೇವಣಿಯ ಅವಧಿಯು ಮುಕ್ತಾಯದ ತರುವಾಯ ಮೊಬಲಗನ್ನು ಕ್ಲೇಮುದಾರರಿಗೆ ಸಂದಾಯ ಮಾಡಲು ಸಹಾ ನಿರ್ದೇಶಿಸಿದೆ.

22. ಕ್ಲೇಮುದಾರರಿಂದ ಸಲ್ಲಿಸಲಾಗಿದ್ದ ಎಂಎಫ್‌ಎ 664/2011 ಅನ್ನು ಭಾಗಶಃ ಅಂಗೀಕರಿಸಿ, ನಿರ್ಲಕ್ಷತೆ ಮತ್ತು ಹೊಣೆಗಾರಿಕೆಯ ಮೇಲೆ ಮತ್ತು ನ್ಯಾಯಾಧೀಕರಣವು ನಿರ್ಣಯಗಳನ್ನು ಸ್ಥಿರೀಕರಿಸಿದ ದೃಷ್ಟಿಯಿಂದ ಮತ್ತು ನ್ಯಾಯಾಧೀಕರಣದಿಂದ ನಷ್ಟ ಪರಿಹಾರವನ್ನು ಹೆಚ್ಚಿಸಿದ ದೃಷ್ಟಿಯಿಂದ, ಆಪಾದಿತ ವಾಹನ ವಿಮಾಕರ್ತರು ದಾಖಲಿಸಿದ್ದ ಎಂಎಫ್‌ಎ 7891/2010ಅನ್ನು ಪರಿಗಣಿಸಲು ಸಾಧ್ಯವಿಲ್ಲ ಮತ್ತು ತದನುಸಾರವಾಗಿ ಅದು ಗುಣಾರ್ಹತೆ ರಹಿತವಾಗಿರುವುದರಿಂದ ಅದನ್ನು ವಜಾ ಮಾಡಲಾಗಿದೆ.

23. ಠೇವಣಿ ಮೊತ್ತವನ್ನು ಮೇಲೆ ಸೂಚಿಸಲಾದ ನಿಬಂಧನೆಗಳ ಅನುಸಾರ ವಿತರಣೆ ಮಾಡುವುದಕ್ಕಾಗಿ ನ್ಯಾಯಾಧಿಕರಣಕ್ಕೆ ವರ್ಗಾಯಿಸುವುದಕ್ಕಾಗಿ ಆದೇಶಿಸಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

---